# ಕರ್ನಾಟಕ ವಿಧಾನ ಪರಿಷತ್

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 91**

**ಸದಸ್ಯರ ಹೆಸರು : ಡಾ ಚಂದ್ರಶೇಖರ ಬಸವರಾಜ ಪಾಟೀಲ (ಪದವೀಧರ ಕ್ಷೇತ್ರ)**

**ಉತ್ತರಿಸಬೇಕಾದ ದಿನಾಂಕ : 09-12-2024**

**ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರು**

| ಪ್ರಶ್ನೆ | ಉತ್ತರ |
|---|---|
| (ಅ) ಕಳೆದ ಎರಡು (2) ತಿಂಗಳಿಂದ ಅನುದಾನಿತ ಪ್ರೌಢ ಶಾಲಾ ಶಿಕ್ಷಕರುಗಳಿಗೆ ವೇತನ ನೀಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | 1. ಬೆಂಗಳೂರು ದಕ್ಷಿಣ ಜಿಲ್ಲೆಯ ಕೆ.ಆರ್. ಪುರಂ ಕ್ಷೇತ್ರ ಶಿಕ್ಷಣಾಧಿಕಾರಿ ಕಛೇರಿ ವ್ಯಾಪ್ತಿಯ ವೀರಭದ್ರ ಸ್ವಾಮಿ ಪ್ರೌಢಶಾಲೆ, ದೊಡ್ಡ ಗುಬ್ಬಿ, ಈ ಶಾಲೆಯಲ್ಲಿ 8ನೇ ತರಗತಿಯಲ್ಲಿ ದಾಖಲಾತಿ ಮನ್ನಾ ಆದೇಶವನ್ನು ನಿರೀಕ್ಷಿಸಿ ಬಿ.ಇ.ಓ ಹಂತದಲ್ಲಿ ಆಗಸ್ಟ್ ಮಾಹೆಯಿಂದ ವೇತನ ತಡೆಹಿಡಿಯಲಾಗಿದೆ.<br>2. ಶ್ರೀ ಗುರುಗುಂಡ ಬ್ರಹ್ಮೇಶ್ವರ ಪ್ರೌಢಶಾಲೆ, ಪಟ್ಟನಾಯಕನಹಳ್ಳಿ, ಶಿರಾ ತಾಲ್ಲೂಕು, ಮಧುಗಿರಿ ಶೈಕ್ಷಣಿಕ ಜಿಲ್ಲೆ ಈ ಶಾಲೆಯಲ್ಲಿ ನಿಗಧಿತ ದಾಖಲಾತಿ/ಹಾಜರಾತಿ ಇಲ್ಲದ ಹಿನ್ನೆಲೆಯಲ್ಲಿ ಕಾರ್ಯಸಾಧುವಲ್ಲದ ಶಾಲೆಯೆಂದು ಪರಿಗಣಿಸಿ ಮಾನ್ಯತೆಯನ್ನು ಹಿಂಪಡೆಯುವ ಪ್ರಕ್ರಿಯೆ ಚಾಲನೆಯಲ್ಲಿದ್ದು, ಸದರಿ ಶಾಲೆಗೆ 2023-24ನೇ ಸಾಲಿನಿಂದ ವೇತನ ನೀಡಿರುವುದಿಲ್ಲ.<br>3. ಕಲಬುರ್ಗಿ ದಕ್ಷಿಣ ವಲಯ ತಾಲ್ಲೂಕಿನ 4 ಶಾಲೆಗಳು ಮತ್ತು ಜೇವರ್ಗಿ ತಾಲ್ಲೂಕಿನ 4 ಶಾಲೆಗಳ ವೇತನವು, 7ನೇ ವೇತನ ಆಯೋಗವು ಜಾರಿಯಾಗಿರುವ ಹಿನ್ನೆಲೆಯಲ್ಲಿ Control Amount ನಲ್ಲಿ ವ್ಯತ್ಯಾಸವಾಗಿರುವುದರಿಂದ ವೇತನ ಪಾವತಿಯಾಗಿರುವುದಿಲ್ಲ. |
| (ಆ) ಬಂದಿದ್ದರೆ, ಯಾವ ಕಾಲಮಿತಿಯೊಳಗೆ ವೇತನವನ್ನು ಬಿಡುಗಡೆ ಮಾಡಲು ಆದೇಶ ಹೊರಡಿಸಲಾಗುವುದು; | ವೀರಭದ್ರಸ್ವಾಮಿ ಪ್ರೌಢಶಾಲೆ, ದೊಡ್ಡಗುಬ್ಬಿ, ಬೆಂಗಳೂರು, ದಕ್ಷಿಣ ಜಿಲ್ಲೆ ಈ ಶಾಲೆಗೆ 2024-25ನೇ ಸಾಲಿಗೆ ದಾಖಲಾತಿ/ಹಾಜರಾತಿ ಮನ್ನಾ ಮಾಡಿ ಆದೇಶಿಸಿ ವೇತನ ಬಿಡುಗಡೆಗೆ ಕ್ರಮವಹಿಸಲಾಗಿದೆ.<br>ಶ್ರೀ ಗುರುಗುಂಡ ಬ್ರಹ್ಮೇಶ್ವರ ಪ್ರೌಢಶಾಲೆ, |

| | |
|---|---|
| | ಪಟ್ಟನಾಯಕನಹಳ್ಳಿ, ಶಿರಾ ತಾಲ್ಲೂಕು, ಮಧುಗಿರಿ ಶೈಕ್ಷಣಿಕ ಜಿಲ್ಲೆ ಈ ಶಾಲೆಗೆ 2024–25ನೇ ಸಾಲಿಗೆ ನಿಗದಿತ ದಾಖಲಾತಿ/ಹಾಜರಾತಿ ಇಲ್ಲದೆ ಇರುವುದರಿಂದ ಶಾಲಾ ಮಾನ್ಯತೆ ಹಿಂಪಡೆಯಲು ನಿಯಮ–39 ರಡಿ ಆಡಳಿತ ಮಂಡಳಿಗೆ ನೋಟಿಸ್ ಜಾರಿಗೊಳಿಸಲಾಗಿದ್ದು, ಆಡಳಿತ ಮಂಡಳಿಯಿಂದ ಇದುವರೆವಿಗೂ ವಿವರಣೆ ಸ್ವೀಕೃತಗೊಂಡಿರುವುದಿಲ್ಲ. ಸದರಿ ಶಾಲೆಯ ಮಾನ್ಯತೆ ಹಿಂಪಡೆದು ಸಿಬ್ಬಂದಿಗಳಿಗೆ ಇತರೆ ಶಾಲೆಗೆ ವರ್ಕಿಂಗ್ ಅರೇಂಜ್‌ಮೆಂಟ್ ಮಾಡಿ ವೇತನ ಬಿಡುಗಡೆ ಮಾಡಲು ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಲಾಗುತ್ತಿದೆ.<br>ಕಲಬುರ್ಗಿ ದಕ್ಷಿಣ ವಲಯ ತಾಲ್ಲೂಕಿನ 4 ಶಾಲೆಗಳು ಮತ್ತು ಜೇವರ್ಗಿ ತಾಲ್ಲೂಕಿನ 4 ಶಾಲೆಗಳ Control Amount ನಲ್ಲಿ ವ್ಯತ್ಯಾಸವನ್ನು ಖಜಾನೆ–2 ತಂತ್ರಾಂಶದಲ್ಲಿ ಸರಿಪಡಿಸಿ ಅನುದಾನ ಬಿಡುಗಡೆಗೊಳಿಸಲು ಕ್ರಮವಹಿಸಲಾಗುತ್ತಿದೆ. |
| (ಇ) ಸದರಿ ವೇತನವನ್ನು ತಡೆಹಿಡಿದಿರುವ ಬಿ.ಇ.ಓ ಮತ್ತು ಡಿ.ಡಿ.ಪಿ.ಐ ಗಳ ಮೇಲೆ ಏನು ಕ್ರಮ ಜರುಗಿಸಲಾಗುವುದು? | ಮೇಲ್ಕಂಡಂತೆ ನಿಯಮಾನುಸಾರ ಕ್ರಮವಹಿಸಲಾಗುತ್ತಿರುವುದರಿಂದ ಬಿ.ಇ.ಓ ಮತ್ತು ಡಿ.ಡಿ.ಪಿ.ಐ ಗಳ ಮೇಲೆ ಕ್ರಮವಹಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. |

ಇಪಿ 176 ಯೋಯೋಕ 2024

(ಎಸ್. ಮಧು ಬಂಗಾರಪ್ಪ)

ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರು